**ಓ.ಎಸ್. ನಂ. 62/2021** **ಪಿ.ಡಬ್ಲ್ಯೂ- 2**

**<u>ಸಾಕ್ಷಿಯನ್ನು ದಿನಾಂಕ 16.12.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ</u>

ನಾನು ಮೂಲತಃ ತುಂಬಸೋಗೆ ಗ್ರಾಮದವನಾಗಿರುತ್ತೇನೆ. ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ವಾದಿಯು ಶಿರಮಳ್ಳಿ ಗ್ರಾಮದವರಾಗಿರುತ್ತಾರೆ. ಅವರು ನನಗೆ 25 ವರ್ಷಗಳಿಂದ ಪರಿಚಯಸ್ಥರಾಗಿರುತ್ತಾರೆ. ನಾನು ಹಾಗೂ ಅವರು ಅನ್ಯೋನ್ಯವಾಗಿರುತ್ತೇವೆ. ಅವರು ವ್ಯವಸಾಯ ಮಾಡುತ್ತಾರೆ. ನನಗೆ 1 ರಿಂದ 3 ನೇ ಪ್ರತಿವಾದಿಯರ ಪರಿಚಯವಿರುತ್ತದೆ. ಉಳಿದ ಪ್ರತಿವಾದಿಗಳ ಪೈಕಿ ಕೆಲವರು ಬೇರೆ ವಿಳಾಸದಲ್ಲಿ ವಾಸವಾಗಿದ್ದು ಕೆಲವರು ತುಂಬಸೋಗೆ ಗ್ರಾಮದಲ್ಲಿ ವಾಸವಾಗಿರುತ್ತಾರೆ. 3 ನೇ ಪ್ರತಿವಾದಿಯು ಪೇಂಟಿಂಗ್ ಕೆಲಸವನ್ನು ಮಾಡುತ್ತಾರೆ. ಪ್ರತಿವಾದಿಯರು ಮೂಲತಃ ವ್ಯವಸಾಯಗಾರರು ಎಂದರೆ ಸರಿ. ಕ್ರಯದ ಕರಾರುಪತ್ರ ಮಾಡಿರುವ ಆಸ್ತಿಯ ಸರ್ವೆ ನಂಬರ್ ನನಗೆ ನೆನಪಿರುವುದಿಲ್ಲ. ಸದರಿ ಆಸ್ತಿಯು 4 ಎಕರೆ ಆಗಿರುತ್ತದೆ. ಅದರ ಪೂರ್ವಕ್ಕೆ ಕೆರೆ, ಪಶ್ಚಿಮಕ್ಕೆ ಬಾನುಪ್ರಕಾಶ್ ರವರ ಜಮೀನು, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಬೇರೆಯವರ ಜಮೀನು ಇರುತ್ತದೆ. ತುಂಬಸೋಗೆಯಲ್ಲಿ ನನಗೆ ಸಂಬಂಧಪಟ್ಟ ಜಮೀನು ಇರುತ್ತದೆ. ನಿಪಿ3 ಕರಾರುಪತ್ರವನ್ನು ಬರೆಸಲು ವಾದಿ ಮತ್ತು ಪ್ರತಿವಾದಿಯರು ಮಾಹಿತಿಯನ್ನು ನೀಡಿರುತ್ತಾರೆ. ಕ್ರಯದ ಕರಾರುಪತ್ರವನ್ನು 12 ಲಕ್ಷ ರೂ.ಗಳಿಗೆ ಮಾಡಲಾಗಿರುತ್ತದೆ. ಸದರಿ ದಿನ ಎಷ್ಟು ದಾಖಲಾತಿಗಳನ್ನು ತಯಾರಿಸಲಾಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಸದರಿ ದಿನ ನಾನು ನೋಂದಣಿ ಕಛೇರಿಯಲ್ಲಿ ನಿಪಿ3 ಕ್ಕೆ ಮಾತ್ರ ಸಹಿ ಮಾಡಿರುತ್ತೇನೆ.

ನಿಡಿ1 ಕ್ರಯದ ಕರಾರುಪತ್ರದ 3 ನೇ ಪುಟದಲ್ಲಿರುವ ಸಾಕ್ಷಿದಾರರು ಎಂದು ಸಹಿ ಮಾಡಿರುವ 2 ನೇ ಸಾಕ್ಷಿಯ ಸಹಿ ನನ್ನದೇ ಆಗಿರುತ್ತದೆ. ಸದರಿ ದಾಖಲೆಯಲ್ಲಿರುವ ಸಹಿ ಜೆರಾಕ್ಸ ಆಗಿರುವುದರಿಂದ ಸದರಿ ಸಹಿಯನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ನಿಪಿ2 ದಾಖಲೆಯಾದ ದಿನವೇ ನಿಡಿ1 ರಂತೆ 25 ಲಕ್ಷ ರೂ.ಗಳಿಗೆ ಮತ್ತೊಂದು ಕ್ರಯದ ಕರಾರುಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ನೆನಪಿರುವುದಿಲ್ಲ. ನಿಪಿ3 ದಾಖಲೆಗೆ ಸಾಕ್ಷಿದಾರನಾಗಿ ಸಹಿ ಮಾಡಲು ನನ್ನನ್ನು ವಾದಿ ಮತ್ತು 3 ನೇ ಪ್ರತಿವಾದಿ ಕರೆದುಕೊಂಡು ಹೋಗಿರುತ್ತಾರೆ. ನಿಪಿ2 ರಲ್ಲಿ ಹಿಂದೆ ವಾದಿ ಮತ್ತು ಪ್ರತಿವಾದಿಯರ ನಡುವೆ 3.5 ಲಕ್ಷ ರೂ.ಗಳಿಗೆ ಬೋಗ್ಯವಾಗಿರುವ ಬಗ್ಗೆ ನಮೂದಾಗಿರುತ್ತದೆ. ಸದರಿ ಬೋಗ್ಯ ಪತ್ರವನ್ನು ನಾನು ನೋಡಿರುತ್ತೇನೆ.

ಸದರಿ ದಿನ ವಾದಿಯು 2 ಲಕ್ಷ ನಗದು ಮತ್ತು ತಲಾ 1 ಲಕ್ಷ ರೂಪಾಯಿಯ ಎರಡು ಚೆಕ್‌ಗಳನ್ನು ಪ್ರತಿವಾದಿಯರಿಗೆ ನೀಡಿರುತ್ತಾರೆ. ನಾನು ವ್ಯವಸಾಯದ ಜೊತೆ ಮೊದಲು ಹತ್ತಿ ವ್ಯಾಪಾರ ಮಾಡುತ್ತಿದ್ದೆ. ಭಾನುಪ್ರಕಾಶ್ ಎಂಬುವವರು ಶುಂಠಿ ಬೆಳೆಯನ್ನು ಬೆಳೆಯುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಮಾನ್ಯವಾಗಿ ಶುಂಠಿ ಬೆಳೆ ಬೆಳೆಸುವ ವ್ಯವಹಾರ ಮಾಡಿದಾಗ ಕರಾರುಪತ್ರವನ್ನು ಬರೆಸಿಕೊಳ್ಳುತ್ತಾರೆ ಎಂದರೆ ಸರಿ. ಶುಂಠಿ ಬೆಳೆ ಬೆಳೆಯುವ ಸಲುವಾಗಿ ನಾನು ಮತ್ತು ವಾದಿ ಕರಾರುಪತ್ರ ಮಾಡಿಕೊಳ್ಳಲು ಪ್ರತಿವಾದಿಯರನ್ನು ಕರೆದುಕೊಂಡು ಹೋಗಿದ್ದೆವು ಎಂದರೆ ಸರಿಯಲ್ಲ. ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ಪ್ರತಿವಾದಿಯರು ವಾದಿಗೆ ಯಾವುದೇ ಕರಾರು ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ವಾದಿ ಮತ್ತು ಇತರ ಸಾಕ್ಷಿದಾರರು ಸೇರಿ ಪ್ರತಿವಾದಿಯರಿಗೆ ಮೋಸ ಮಾಡಲು ನಿಪಿ3 ರಂತೆ ಕ್ರಯದ ಕರಾರುಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ದಾವಆಸ್ತಿ ಹೊರತುಪಡಿಸಿ ಬೇರೆ ಜಮೀನು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿ, 1, 2 ಮತ್ತು 8 ನೇ ಪ್ರತಿವಾದಿಯ ಗಂಡ ಪುಟ್ಟಸ್ವಾಮಿರವರು ಹಣದ ವ್ಯವಹಾರ ಮಾಡುವ ವಿಚಾರ ಗೊತ್ತಿರುತ್ತದೆ ಎಂದರೆ ಸಾಕ್ಷಿದಾರರು 20 ವರ್ಷಗಳಿಂದ ಭೋಗ್ಯ ವ್ಯವಹಾರ ಮಾಡಿರುವ ವಿಚಾರ ಗೊತ್ತಿರುತ್ತದೆ ಎನ್ನುವರು. ನಾನು ವಾದಿಯ ಜೊತೆ ಅನ್ಯೋನ್ಯವಾಗಿರುವುದರಿಂದ ನಿಪಿ3 ರಂತೆ ಕ್ರಯದ ಕರಾರುಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಆಸ್ತಿಯಲ್ಲಿ ವಾದಿಯು ಬೋರ್ವೆಲ್ ಹಾಕಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಆಸ್ತಿಯನ್ನು ನೋಡಿರುತ್ತೇನೆ. ವಾದಿಯು ಶುಂಠಿ ಬೆಳೆಯನ್ನು ಮಾಡುತ್ತೇನೆ ಎಂದು ಅಕ್ರಮವಾಗಿ ದಾವಆಸ್ತಿಯಲ್ಲಿ ಅಕ್ರಮವಾಗಿ ಬೋರವೆಲ್ ಕೊರೆಸಿದ್ದು ಅದಕ್ಕೆ ಪ್ರತಿವಾದಿಯರು ವಿದ್ಯುತ್ ಸಂಪರ್ಕ ಪಡೆಯಲು ತಕರಾರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ದಾವಆಸ್ತಿಯಲ್ಲಿ ಹತ್ತಿ ಮತ್ತು ಟೊಮಾಟೋ ಬೆಳೆಯನ್ನು ಭಾನುಪ್ರಕಾಶ್ ರವರ ಜಮೀನಿನಿಂದ ನೀರು ಹಾಯಿಸಿ 1 ವರ್ಷಗಳ ಬೆಳೆ ಬೆಳೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬೋರವೆಲ್ ಕೊರೆಸಿರುವ ಬಗ್ಗೆ ಪ್ರತಿವಾದಿಯರು ಗಲಾಟೆ ಮಾಡಿದಾಗ ನಾನು ಮತ್ತು ವಾದಿ ಸದರಿ ಬೋರವೆಲ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಅವಕಾಶ ನೀಡಿ ಎಂದು ಪ್ರತಿವಾದಿಯರ ಮೇಲೆ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಸೇರಿ ಶುಂಠಿ ಬೆಳೆ ಬೆಳೆಸುವ ಕರಾರುಪತ್ರ ಮಾಡಿಸಿಕೊಳ್ಳಲು ನೋಂದಣಿ ಕಛೇರಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ, ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.